ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 943 ಹೆಕ್ಟೇರಗಳು.

ಆ) 201 ಹೆಕ್ಟೇರಗಳು.

ಇ) ಕಾಲುವೆಯಲ್ಲಿ ಪೂರ್ತಿ ಕ್ಷೇತ್ರಕ್ಕೆ ನೀರು ಬಿಡಲಾಗುತ್ತಿದ್ದರೂ ಸಹ ಅಚ್ಚುಕಟ್ಟು ಪ್ರದೇಶ ಏರಿಳತದಿಂದಿದ್ದು, ರೈತರು ತಮ್ಮ ಜಮೀನನ್ನು ಲೆವೆಲಿಂಗ್ (ಸಮಪಾತಳಿ) ಮಾಡಬೇಕಾಗಿರುವುದರಿಂದ ಪೂರ್ಣ ಅಚ್ಚುಕಟ್ಟು ಪ್ರದೇಶ ನೀರಾವರಿ ಆಗುತ್ತಿಲ್ಲ.

ಈಜಿಪುರಕ್ಕೆ ಮೂಲಭೂತ ಸೌಲಭ್ಯಗಳು.

368 - ಶ್ರೀ ಜೆ.ವಿ. ಫರ್ನಾಂಡಿಸ್ (ನಾಮನಿರ್ದೇಶನ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಜೀಪುರ ಗ್ರಾಮ, ಬೇಗೂರು ಹೋಬಳಿ (ಕೋರಮಂಗಲ ಹತ್ತಿರ) ಈ ಗ್ರಾಮವು ಬೆಂಗಳೂರು ನಗರಪಾಲಿಕೆಗೆ ಸೇರಿಸುವ ಪ್ರಸ್ತಾವನೆ ಇದೆಯೇ? ಎಂದು ಸೇರಿಸಲಾಗುವುದು;

ಆ) ಸರ್ಕಾರದಿಂದ ಈಜೀಪುರ ಗ್ರಾಮಕ್ಕೆ ಪೌರ ಸವಲತ್ತುಗಳಾದ ಕುಡಿಯುವ ನೀರು, ನೈರ್ಮಲ್ಯ ಮತ್ತು ಬೀದಿ ದೀಪಗಳ ವ್ಯವಸ್ಥೆ ಮಾಡಲು ಪ್ರಸ್ತಾವನೆ ಇದೆಯೇ? ಹಾಗಿದ್ದಲ್ಲಿ ಯಾವಾಗ ಒದಗಿಸಲಾಗುವುದು.

ಶ್ರೀ ಆರ್. ರೋಷನಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ ಸಚಿವರು) :

ಅ) ಇನ್ನೂ ನಿರ್ಧಾರ ಕೈಗೊಂಡಿರುವುದಿಲ್ಲ.

ಆ) ಹೌದು. ಈ ಗ್ರಾಮದಲ್ಲಿ ವಿವಿಧೋದ್ದೇಶ ತಾಂತ್ರಿಕ ಇಲಾಖೆ ವತಿಯಿಂದ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಯಡಿಯಲ್ಲಿ ಟ್ಯಾಂಕ್ ನಿರ್ಮಾಣವಾಗುತ್ತಿದ್ದು, ಅಂತಿಮ ಘಟ್ಟದಲ್ಲಿದೆ. ಹಾಗೂ ಅಧಿಸೂಚಿತ ಪ್ರದೇಶ ಸಮಿತಿ ವತಿಯಿಂದ ಕಿರು ನೀರು ಸರಬರಾಜು ಯೋಜನೆಯ ಅಡಿಯಲ್ಲಿ ಎರಡು ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಒಂದನ್ನು ಇಂದಿರಾಗಾಂಧಿ ಕೊಳವೆ ಪ್ರದೇಶದಲ್ಲೂ ಇನ್ನೊಂದನ್ನು ಸ್ಮಶಾನದ ಹತ್ತಿರ, ನೀರಿನ ಸೌಕರ್ಯವನ್ನು ಒದಗಿಸುವ ಕಾಮಗಾರಿಯು ಪ್ರಗತಿಯಲ್ಲಿದೆ. ಈ ಗ್ರಾಮದಲ್ಲಿ ಇತ್ತೀಚೆಗೆ ಮೂರು ಬೋರವೆಲಗಳನ್ನು ಕೊರೆದಿದ್ದು ಒಂದರಲ್ಲಿ ನೀರು ಬಂದಿರುವುದಿಲ್ಲ. ಈ ಗ್ರಾಮದ ಮುಖ್ಯ ರಸ್ತೆಯಲ್ಲಿ ಬಸ್ ನಿಲ್ದಾಣದಿಂದ 1 ಕಿ.ಮೀ. ರಸ್ತೆ ಹಾಗೂ ಅಡ್ಡ ರಸ್ತೆಗಳು ಸೇರಿದಂತೆ ಶ್ರೀನಿವಾಗಿಲು ವರೆಗೆ 5 ಲಕ್ಷ ರೂಪಾಯಿಗಳ ದಾಂಬರೀಕರಣ ಮಾಡಿಸಲಾಗಿದೆ. ಅಲ್ಲದೆ ಎಲ್ಲಾ ಬೀದಿ ದೀಪಗಳನ್ನು ದುರಸ್ತಿ ಮಾಡಲಾಗಿದ್ದು ನೈರ್ಮಲ್ಯ ಕಾರ್ಯವನ್ನು ಈ ಸಮಿತಿಯಿಂದ ಮಾಡಿಸಲಾಗುತ್ತಿದೆ.

ರಾಜ್ಯದಲ್ಲಿರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ

371 - ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ?*

ಆ) *ಸಣ್ಣ ಕೆರೆಗಳ ದುರಸ್ತಿ ಮತ್ತು ಹೂಳೆತ್ತುವ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆ;*

ಇ) *ಕೊರಟಗೆರೆ ತಾಲ್ಲೂಕಿನಲ್ಲಿ ಎಷ್ಟು ನೀರಾವರಿ ಕೆರೆಗಳ ದುರಸ್ತಿ ಮತ್ತು ಹೂಳೆತ್ತುವ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ?*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) 36658.

ಆ) ಕೆರೆಗಳ ಅತಿ ಅವಶ್ಯಕ ಅಭಿವೃದ್ಧಿ (ದುರಸ್ತಿ) ಹಾಗೂ ಕೆಲವು ಕೆರೆಗಳ ಭಾಗಶಃ ಹೂಳನ್ನು ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಮೂವತ್ತು ಕೆರೆಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ಪೋಲೀಸ್ ಕ್ವಾರ್ಟರ್ಸ್

372 - ಶ್ರೀ ಬಸನಗೌಡ ಪಾಟೀಲ (ಬಿಜಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ಜಿಲ್ಲೆಯಲ್ಲಿ ಪೊಲೀಸ್ ಸಿಬ್ಬಂದಿಗಳಿಗಾಗಿ ನಿರ್ಮಿಸಲಾದ ವಸತಿಗಳೆಷ್ಟು? (ತಾಲ್ಲೂಕವಾರು ವಿವರ ನೀಡುವುದು);*

ಆ) *ಪೊಲೀಸ್ ಸಿಬ್ಬಂದಿಗಳಿಗೆ ಸರಿಯಾದ ವಸತಿ ವ್ಯವಸ್ಥೆ ಇಲ್ಲದೇ ಇರುವುದರಿಂದ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಇ) *ಹಾಗಿದ್ದಲ್ಲಿ, ಸುಸಜ್ಜಿತ ವಸತಿ ಸೌಕರ್ಯ ನೀಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು*

ಈ) *ವಿಜಾಪುರ ಜಿಲ್ಲಾ ಕೇಂದ್ರ ವಿಜಾಪುರದಲ್ಲಿರುವ ಪೊಲೀಸ್ ಸಿಬ್ಬಂದಿಗಳಿಗಾಗಿ ನಿರ್ಮಿಸಿದ ಮನೆಗಳೆಷ್ಟು? ನೀಡಿದ ಸೌಕರ್ಯಗಳೇನು? ಮುಂದಿನ ಯೋಜನೆಗಳೇನು? (ಸಂಪೂರ್ಣ ವಿವರ ನೀಡುವುದು)?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 1096. ತಾಲ್ಲೂಕವಾರು ವಿವರಗಳನ್ನು ಲಗತ್ತಿಸಿದೆ.

ಆ) ಹೌದು.

ಇ) ಪೊಲೀಸ್ ಸಿಬ್ಬಂದಿಗೆ ಸುಸಜ್ಜಿತ ವಸತಿ ಸೌಕರ್ಯವನ್ನು ಕಲ್ಪಿಸಲು ಸರ್ಕಾರವ ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮವನ್ನು 1985ನೇ ಸಾಲಿನಲ್ಲಿ ಸ್ಥಾಪಿಸಿತು. ಅದರ ಮೂಲ